<u>ಸಾಕ್ಷಿಯನ್ನು ದಿಃ 03-11-2020 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ವಾದಿಗಳ ಪರ ಶ್ರೀ ಎಸ್ ಜೆ ವಕೀಲರಿಂದಃ</u>**

ದಾವಾಸ್ತಿಗಳನ್ನು ಪ್ರತಿವಾದಿಗಳು ಖರೀದಿಸಿದ್ದಾರೆಂದು ನಾನು ಹೇಳಿದ್ದು ಅವುಗಳನ್ನು ಖರೀದಿಸುವ ಸಮಯದಲ್ಲಿ ನನಗೆ 12-13 ವರ್ಷ ವಯಸ್ಸಾಗಿತ್ತು. ಆ ಕ್ರಯ ಪತ್ರಗಳನ್ನು ನಾನು ನೋಡಿಲ್ಲ. ಸ್ವತ್ತನ್ನು ಖರೀದಿಸಿರುವವರು ಆ ವಿಷಯವನ್ನು ನನಗೆ ತಿಳಿಸಿದ್ದಾರೆ. ಆ ಸ್ವತ್ತನ್ನು ಖರೀದಿಸಿದಾಗಲೇ ಖರೀದಿದಾರರು ಆ ವಿಚಾರವನ್ನು ನನಗೆ ತಿಳಿಸಿದ್ದಾರೆ. ಪ್ರತಿವಾದಿಗಳು ಸ್ವತ್ತನ್ನು ಖರೀದಿಸಿದ ಬಗ್ಗೆ ಮಾಡಲಾದ ಕ್ರಯಪತ್ರದ ದಿನಾಂಕ ನನಗೆ ಗೊತ್ತಿಲ್ಲ .

ಪ್ರತಿವಾದಿಗಳು ದಾವಾಸ್ತಿಗಳನ್ನು ಖರೀದಿಸಿದಾಗ ಅವು ಯಾರ ಹೆಸರಲ್ಲಿ ಇದ್ದವು ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಖರೀದಿಸಿದ ಸ್ವತ್ತಿನ ಸರ್ವೆ ನಂ.63/3. 2 ನೇ ಪ್ರತಿವಾದಿ ಎಷ್ಟು ವಿಸ್ತೀರ್ಣದ ಸ್ವತ್ತನ್ನು ಖರೀದಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಖರೀದಿಸಿದ ಸ್ವತ್ತಿನ ಪೂರ್ವಕ್ಕೆ ರಸ್ತೆ ಇದ್ದು, ಪಶ್ಚಿಮಕ್ಕೆ ಅದೇ ಸರ್ವೆ ನಂಬರಿನಲ್ಲಿರುವ ದೇವೀರಮ್ಮ-ಶಿವಣ್ಣನವರ ಜಮೀನು, ಉತ್ತರಕ್ಕೆ ಅದೇ ಸರ್ವೆ ನಂಬರಿನಲ್ಲಿರುವ ಕುಂಟಪ್ಪನ ಜಮೀನು ಹಾಗೂ ದಕ್ಷಿಣಕ್ಕೆ ದೇವೀರಮ್ಮ ಹಾಗೂ ಶಿವಣ್ಣನವರ ಜಮೀನು ಇದೆ. ಪ್ರತಿವಾದಿಗಳು ಬರೆಸಿಕೊಂಡಿರುವ ಕ್ರಯ ಪತ್ರವನ್ನು ನಾನು ನೋಡಿಲ್ಲ

3 ನೇ ಪ್ರತಿವಾದಿ ಖರೀದಿಸಿರುವ ಜಮೀನಿನ ಕ್ರಯಪತ್ರವನ್ನು ನಾನು ನೋಡಿಲ್ಲ . ಅದರಲ್ಲಿ ಎಷ್ಟು ವಿಸ್ತೀರ್ಣ ನಮೂದಿಸಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಖರೀದಿಸಿರುವ ಜಮೀನಿನ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ದೇವೀರಮ್ಮ-ಶಿವಣ್ಣನವರ ಜಮೀನು, ದಕ್ಷಿಣಕ್ಕೆ ಗುಡ್ಡದ ಚಿಕ್ಕಣ್ಣ ಮತ್ತು ಮಕ್ಕಳ ಜಮೀನು ಉತ್ತರಕ್ಕೆ ದೊಡ್ಡಪಾತಪ್ಪನ ಜಮೀನು ಇದೆ. ಈಗ ದಾವಾಸ್ತಿಗಳ ಖಾತೆ ಯಾರ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಬರೆಸಿಕೊಂಡಿದ್ದಾರೆ ಎನ್ನುವ

ದಾಖಲೆ ಕರಾರು ಪತ್ರವೋ ಅಥವಾ ಕ್ರಯಪತ್ರವೋ ಎನ್ನುವುದು ನನಗೆ ನಿಖರವಾಗಿ ಗೊತ್ತಿಲ್ಲ

3 ನೇ ಪ್ರತಿವಾದಿ ಯಾರಿಂದ ಜಮೀನು ಖರೀದಿಸಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಎಷ್ಟು ವಿಸ್ತೀರ್ಣದ ಜಮೀನು ಖರೀದಿಸಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಶಂಬುಲಿಂಗಪ್ಪ ಹಾಗೂ ಶಿವಣ್ಣನಿಂದ ಜಮೀನನ್ನು ಖರೀದಿಸಿದ್ದಾನೆ. ಆ ಕ್ರಯ ಪತ್ರವನ್ನು ನಾನು ನೋಡಿಲ್ಲ . ಖರೀದಿದಾರರು ಆ ವಿಷಯ ನನಗೆ ಹೇಳಿದ್ದಾರೆ. 4 ನೇ ಪ್ರತಿವಾದಿ ಖರೀದಿಸಿದ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ದೇವೀರಮ್ಮ-ಶಿವಣ್ಣನವರ ಜಮೀನು, ದಕ್ಷಿಣಕ್ಕೆ ದೊಡ್ಡಪಾತಪ್ಪನ ಜಮೀನು ಉತ್ತರಕ್ಕೆ ಹುರುಳಿಪಾತಣ್ಣನ ಜಮೀನು ಇದೆ.

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ಚೆಕ್ಕುಬಂಧಿಯನ್ನು ಕ್ರಯಪತ್ರಗಳನ್ನು ನೋಡಿ ದೃಢಪಡಿಸಿಕೊಂಡಿಲ್ಲ . ಯಾವ ಆಧಾರದಲ್ಲಿ ಸ್ವತ್ತಿನ ಅಳತೆಯನ್ನು ಬರೆದಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಕೀಲರು ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ವಕೀಲರು ಸಹಿ ಮಾಡಲು ಹೇಳಿದ್ದರಿಂದ ನೀವು ಸಹಿ ಮಾಡಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಅದರಲ್ಲಿ ಬರೆದಿರುವುದು ಸರಿಯಾಗಿದೆ ಎಂದು ಸಹಿ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ದಾವಾಸ್ತಿಯ ಅಕ್ಕಪಕ್ಕದಲ್ಲಿ ನನಗೆ ಜಮೀನು ಇಲ್ಲ.

ಬೀರೇನಹಳ್ಳಿ ಗ್ರಾಮದಲ್ಲಿ 2 ರಿಂದ 4 ನೇ ಪ್ರತಿವಾದಿಗಳಿಗೆ ಸೇರಿದ ಮನೆಗಳು ಇವೆ ಎಂದರೆ ಸರಿ . 2 ರಿಂದ 4 ನೇ ಪ್ರತಿವಾದಿಗಳು ದಾವಾಸ್ತಿಯ ಸ್ವಾಧೀನತೆ ಹೊಂದಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳು ಬರೆಸಿಕೊಂಡಿರುವ ದಾಖಲೆಗಳು ನೋಂದಣಿಯಾಗಿವೆಯೇ ಇಲ್ಲವೇ ಎನ್ನುವುದು ನನಗೆ ಗೊತ್ತಿಲ್ಲ. 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ದಾವಾಸ್ತಿಗಳ ಖಾತೆ ಬದಲಾವಣೆಯಾಗಿದೆಯೇ ಇಲ್ಲವೇ ಎನ್ನುವುದು ನನಗೆ ಗೊತ್ತಿಲ್ಲ. 2 ರಿಂದ 4 ನೇ ಪ್ರತಿವಾದಿಗಳಿಗೆ ಸೇರಿದ ಕಣ, ರೊಪ್ಪ ಇತ್ಯಾದಿಗಳು ದಾವಾಸ್ತಿಗಳಲ್ಲಿ ಇವೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳಿಗೆ ವಾದಿಗಳು ದಾವಾಸ್ತಿಯನ್ನು

ಮಾರಾಟ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಪ್ರತಿವಾದಿಗಳಿಗೆ ದಾವಾಸ್ತಿಯನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.